

# ನಟನೆ ನನಗೆ ಪ್ರವೃತ್ತಿ

**ರಕ್ಷಿತಾ**

ಕಲರ್ಸ್ ಕನ್ನಡದ 'ಮನೆದೇವ್ರು' ಜಾನಕಿ

★ *ದ್ವಿಪಾತ್ರದ ಮಹಿಮೆ ಏನು?*

ಜಾನಕಿ ಮತ್ತು ಸೀತೆ ಒಂದೇ ಪಾತ್ರ. ಅದು ಅನಿವಾರ್ಯ ತಂತ್ರವಾಗಿದೆ. ಸೀತಾನೇ ಜಾನಕಿ ಎಂದರೆ ಅವಳ ಕಥೆ ಮುಗಿದೇ ಹೋಗುತ್ತದೆ. ನಾಯಕನಿಗೆ ಈ ಸತ್ಯ ಗೊತ್ತು. ನಾಯಕನ ತಂದೆಗೆ ಗೊತ್ತಿಲ್ಲ. ಜಾನಕಿಯಾದ ನಾನು ತಮ್ಮ ಮಗನನ್ನು ಮೋಸದಿಂದ ಬಲೆಗೆ ಹಾಕಿಕೊಂಡು ಮದುವೆ ಮಾಡಿಕೊಂಡಿದ್ದೇನೆ ಎನ್ನುವ ಸಿಟ್ಟಿದೆ. ಆ ಸಿಟ್ಟನ್ನು ಅವರು ಎಂತಹ ದುರಂತದ ಮೂಲಕ ಅಂತ್ಯ ಹೇಳಲೂ ಸಿದ್ಧರಿದ್ದಾರೆ. ಅಂತಹ ಅಪಾಯದಿಂದ ಪಾರಾಗಲು ಅವರ ಮನೆಯ ಗೃಹಕೃತ್ಯ ಎಸಗುವ ಸಹಾಯಕಿಯಾಗಿ ಸೀತೆ ಎಂದು ಪ್ರವೇಶಿಸಿದ್ದೇನೆ. ನನ್ನ ಪ್ರಾಮಾಣಿಕತೆ, ಕೆಲಸದ ವೈಖರಿಯಿಂದ ಅವರ ಮನ ಗೆದ್ದಿದ್ದೇನೆ. ಕೆಲಸದವಳು ಎನ್ನುವ ಭಾವನೆ ಇಲ್ಲದೆ ಅವರಲ್ಲಿ ಒಬ್ಬಳಾದ ನಾನು ಮತ್ತೆ ಅವರ ಮಗನನ್ನು ಮದುವೆಯಾಗಿದ್ದೇನೆ. ತುಂಬಾ ಗಂಭೀರವೂ ಪ್ರೌಢಿಮೆಯೂ ಇರುವ ಪಾತ್ರ.

★ *ನಟಿಯಾಗುವ ಸಂದರ್ಭ ಹೇಗೆ ಬಂತು?*

ನಮ್ಮೂರು ಮೈಸೂರು. ಭರತ ನಾಟ್ಯ ಕಲಾವಿದೆ. ಹತ್ತು ವರ್ಷಗಳಿಂದ ಆರತಿ ಅರುಣ್ ಅವರ ಬಳಿ ನೃತ್ಯ ಅಭ್ಯಾಸ ಮಾಡುತ್ತಿದ್ದೇನೆ. ಒಮ್ಮೆ ಶ್ರುತಿ ನಾಯ್ಡು ಅವರು 'ಮಹಾದೇವಿ'ಗೆ ಬ್ರಹ್ಮಚಾರಿಣಿ ಪಾತ್ರಕ್ಕೆ ಅಭಿನಯಿಸಲು ಹೇಳಿದರು. ದೇವಿ ಪಾತ್ರದಲ್ಲಿ ಮೊದಲ ಬಾರಿಗೆ ಕ್ಯಾಮೆರಾವನ್ನು ಎದುರಿಸಿದೆ. ಒಂದು ರೀತಿಯಲ್ಲಿ ಅದು ಅತಿಥಿ ಪಾತ್ರ. ಮೂರು, ನಾಲ್ಕು ಬಾರಿ ಬಣ್ಣ ಹಚ್ಚಿದೆ. ಅಷ್ಟರಲ್ಲಿ 'ಮನೆದೇವ್ರು'ನಲ್ಲಿ ನಾಯಕಿ ಪಾತ್ರಕ್ಕೆ ಅವಕಾಶ ಸಿಕ್ಕಿದೆ. ಇದು ನನಗೆ ಪ್ಯಾಶನ್. ಇದೇ ವೃತ್ತಿಯಾಗಿ ತೆಗೆದುಕೊಂಡಿಲ್ಲ. ನನ್ನಲ್ಲಿ ಕಲೆ ಇದೆ, ಸಮಯವೂ ಇದೆ ಅದನ್ನು ಪ್ರಕಟಿಸುತ್ತಿದ್ದೇನೆ. ಅಭಿನಯ– ನೃತ್ಯ ಖುಷಿಗಾಗಿ ಮಾಡುವ ಪ್ರವೃತ್ತಿ.

★ *ಸಿನಿಮಾಕ್ಕೆ ಅವಕಾಶ ಸಿಕ್ಕರೆ ಏನು ಮಾಡುತ್ತೀರಿ?*

ಈಗಾಗಲೇ ಅಂತಹ ಬೇಡಿಕೆ ಒಂದೆರಡು ಬಂದಿದ್ದವು. ನಾನು ನಟಿಸಲು ಆಗುವುದಿಲ್ಲ ಎಂದೇ ಹೇಳಿದ್ದೇನೆ. ಧಾರಾವಾಹಿಯಲ್ಲೇ ಸಾಕಷ್ಟು ಕಲಿಯುವ ಅವಕಾಶ ಇದೆ. ಇಲ್ಲಿ ಕೌಟುಂಬಿಕ ವಾತಾವರಣ ಇರುತ್ತದೆ. ಹಿರಿಯರು ಹೇಳಿಕೊಡುತ್ತಾರೆ. ಸಿನಿಮಾದಲ್ಲೂ ಹೇಳಿಕೊಡಬಹುದು. ಆದರೆ ನನಗೆ ಟಿವಿ ಹಿಡಿಸಿದೆ. ಎಲ್ಲದಕ್ಕಿಂತ ಮುಖ್ಯವಾಗಿ ನನಗೆ ಓದು ಮುಖ್ಯ. ನನ್ನ ಓದಿಗೆ ತೊಂದರೆಯಾಗದಂತೆ ಕಲಾಭ್ಯಾಸ ಮಾಡುತ್ತಿದ್ದೇನೆ. ಐಎಎಸ್ ನನ್ನ ಮುಖ್ಯ ಗುರಿ. ಅದಕ್ಕಾಗಿ ಸ್ವಯಂ ತಯಾರಿ ನಡೆಸಿದ್ದೇನೆ. ಅನಿವಾರ್ಯ ಅನ್ನಿಸಿದಾಗ ತರಬೇತಿ ಪಡೆದು ಅಧಿಕಾರಿ ಆಗಲೇಬೇಕು ಎನ್ನುವ ಕನಸನ್ನು ಹೊತ್ತಿದ್ದೇನೆ. ಸಿನಿಮಾ ಎಂದು ಪೂರ್ಣಾವಧಿ ಕೊಡಲು ಸಾಧ್ಯ ಆಗುವುದಿಲ್ಲ. ಟಿವಿಯಲ್ಲಿ ತುಂಬಾ ಸಮಯವನ್ನು ಹೊಂದಾಣಿಕೆ ಮಾಡಿಕೊಳ್ಳಬಹುದು. ಓದಲು ತೊಂದರೆ ಆಗುವುದಿಲ್ಲ ಎಂದೇ ಇಲ್ಲಿ ನಟಿಸುತ್ತಿದ್ದೇನೆ.

★ *ನಟಿಯಾದ ನಂತರ ನಿಮ್ಮನ್ನು ಜನ ನೋಡುವ ದೃಷ್ಟಿ ಹೇಗಿದೆ?*

ಬಾಲ್ಯದಿಂದಲೂ ಚೂಟಿಯಾಗಿದ್ದೆ. ತುಂಬಾ ಮಾತನಾಡುತ್ತಿದ್ದೆ. ನಮ್ಮ ಬಂಧುಗಳೆಲ್ಲ 'ಆ್ಯಂಕರ್ ಆಗಲು ಸರಿ ಇದ್ದೀಯಾ' ಎಂದು ರೇಗಿಸುತ್ತಿದ್ದರು. ಅದರಂತೆಯೇ ಶಾಲಾ ದಿನಗಳಲ್ಲಿಯೇ ಸಿಕ್ಕಾಪಟ್ಟೆ ಕಾರ್ಯಕ್ರಮಗಳನ್ನು ನೀಡಿದೆ. ಮೈಸೂರಿನ ವಿವಿಧ ಬಡಾವಣೆ, ದೇವಸ್ಥಾನಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನಡೆಸಿಕೊಟ್ಟೆ. ನನಗೆ ಸಭಾ ಕಂಪನ ಎನ್ನುವುದು ಎಂದೂ ಕಾಡಲೇ ಇಲ್ಲ. ಆಕಸ್ಮಿಕವಾಗಿ ಟಿವಿಯಲ್ಲಿ ಅವಕಾಶ ಸಿಕ್ಕಿತು. ನಟಿಸಿದೆ. ನನ್ನನ್ನು ಮೇಕಪ್ ಇಲ್ಲದಿದ್ದರೆ ಯಾರೂ ಗುರ್ತಿಸುವುದೇ ಇಲ್ಲ. ಇದನ್ನು ನಾನು ಅನುಕೂಲ ಎಂದುಕೊಳ್ಳಬೇಕೋ, ಅನಾನುಕೂಲ ಎಂದುಕೊಳ್ಳಬೇಕೋ ಗೊತ್ತಿಲ್ಲ. ಇತ್ತೀಚೆಗೆ ಕೆಲವರು ಗುರುತಿಸುತ್ತಿದ್ದಾರೆ. ಪಾತ್ರವನ್ನು ನಿರ್ವಹಿಸುವ ಬಗ್ಗೆ ಮೆಚ್ಚುಗೆ ಮಾತುಗಳನ್ನು ಆಡಿ ಹುರಿದುಂಬಿಸುತ್ತಿದ್ದಾರೆ.

★ *ವೃತ್ತಿಯಾಗಿ ನಟನೆಯನ್ನು ಏಕೆ ತೆಗೆದುಕೊಳ್ಳುತ್ತಿಲ್ಲ?*

ರಂಗ ಬದುಕಿನಲ್ಲಿಯೂ ಪ್ರಭಾವಿಯಾಗಿ ಬೆಳೆಯುವ ಸಾಧ್ಯತೆಯಿದೆ. ಕಲಾವಿದರನ್ನು ಅನೇಕರು ಅನುಕರಿಸುತ್ತಾರೆ. ಆದರೆ ನನ್ನ ಆಲೋಚನೆಯೇ ಬೇರೆ ಇದೆ. ನನ್ನ ಸಾಮರ್ಥ್ಯ ಸಮಾಜಮುಖಿಯಾಗಿ ಬಳಕೆಯಾಗಬೇಕು. ಆಡಳಿತಾಧಿಕಾರಿ ಆಗಬೇಕು ಎನ್ನುವುದು ನನ್ನ ಬಾಲ್ಯದ ಕನಸು.

■ **ರಾಘವೇಂದ್ರ**